**ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಇ.ಎನ್. ವಕೀಲರಿಂದಃ**

ಆರ್.ಅಬ್ದುಲ್ ಗಫಾರ್ ಸಾಬ್ ರವರು 1 ನೇ ಪ್ರತಿವಾದಿಯ ಗಂಡ ಹಾಗೂ 2 ರಿಂದ 11 ನೇ ಪ್ರತಿವಾದಿಯವರ ತಂದೆ ಅಂದರೆ ಸರಿ. ನನ್ನ ತಂದೆ ಆರ್.ಅಬ್ದುಲ್ ಜಬ್ಬಾರ್ ಸಾಬ್ ರವರು 1970 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವ ಮುಂಚೆ ಆರ್.ಅಬ್ದುಲ್ ಗಫಾರ್ ಸಾಬ್ ರವರು ಗೇಣಿ ಮಾಡುತ್ತಿದ್ದರು ಅಂದರೆ ಸರಿ. ನಿಪಿ–1 ಆರ್.ಅಬ್ದುಲ್ ಗಫಾರ್ ಸಾಬ್ ರವರ ಹೆಸರಿನಲ್ಲಿದೆ ಅಂದರೆ ಸರಿ. ಅದೇ ರೀತಿ ನಿಪಿ–4 ರಂತೆ ಭೂ ನ್ಯಾಯ ಮಂಡಳಿಯಲ್ಲಿ ಆರ್.ಅಬ್ದುಲ್ ಗಫಾರ್ ಸಾಬ್ ರವರ ಹೆಸರಿನಲ್ಲಿ ಆದೇಶವಾಗಿರುತ್ತದೆ ಅಂದರೆ ಸರಿ. ನಮೂನೆ ನಂ.10 ನ್ನು ಸಹ ಅವರಿಗೆ ನೀಡಿರುತ್ತಾರೆ ಅಂದರೆ ಸರಿ. ಅದೇ ರೀತಿ ನಿಪಿ–2 ರಂತೆ ಅವರ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ ಅಂದರೆ ಸರಿ. ದಾವಾ ಆ್ತಸಿಯನ್ನು ಅವರೇ ಗೇಣಿ ಮಾಡುತ್ತಿದ್ದು, ಅವರ ಜೀವಿತಾವಧಿಯಲ್ಲಿ ಅವರ ಹೆಸರಿಗೆ ಮಂಜೂರು ಆಗಿರುತ್ತದೆ ಅಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ಒಟ್ಟು ಕುಟುಂಬದಲ್ಲಿ ಸಾಗುವಳಿ ಮಾಡುತ್ತಿದ್ದೆವು ಎಂದು ಉತ್ತರಿಸುತ್ತಾರೆ. ನಮ್ಮಲ್ಲಿ ಯಾವುದೇ ಒಟ್ಟು ಕುಟುಂಬ ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಮನೆ ಅಳಿಯನಾಗಿ ಶಿಕಾರಿಪುರ ತಾಲ್ಲೂಕಿನ ಉಡುಗಣಿಯಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. ತಂದೆಯವರ ಮರಣ ಶಾಸನದ ಪ್ರಕಾರ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಹಂಚಿಕೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ನನ್ನ ಅಣ್ಣನ ಆಸ್ತಿಯಾಗಿರುವುದರಿಂದ ನನ್ನ ತಂದೆಯವರು ಹಂಚಿಕೆ

ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಅಣ್ಣ ಆರ್.ಅಬ್ದುಲ್ ಗಫಾರ್ ಸಾಬ್ ರವರು ಯಾವಾಗ ತೀರಿಕೊಂಡರು ಅಂದರೆ ಸಾಕ್ಷಿಯು 2012 ರಲ್ಲಿ ಎಂದು ಉತ್ತರಿಸುತ್ತಾರೆ. ನನ್ನ ಅಣ್ಣ ಜೀವಂತ ಇರುವಾಗ ದಾವಾ ಆಸ್ತಿಗಳಲ್ಲಿ ಯಾವುದೇ ಹಿಸ್ಸಾ ಹಕ್ಕು ಕೇಳಿರುವುದಿಲ್ಲ ಅಂದರೆ ಸಾಕ್ಷಿಯು ಅವರು ಕುಟುಂಬದ ವ್ಯವಸ್ಥಾಪಕರಾಗಿದ್ದು, ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸುತ್ತಾರೆ. ನಾವು ಯಾವುದೇ ಕಾಲಕ್ಕೂ ದಾವಾ ಆಸ್ತಿಯಲ್ಲಿ ಉಳುಮೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಗೇಣಿ ಅರ್ಜಿಯನ್ನು ಆರ್.ಅಬ್ದುಲ್ ಗಫಾರ್ ಸಾಬ್ ರವರು ಸಲ್ಲಿಸಿರುತ್ತಾರೆ ಅಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟು ಕುಟುಂಬದ ಪರವಾಗಿ ಸಲ್ಲಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ಅಧಿಭೋಗ ಹಕ್ಕು ನನ್ನ ಅಣ್ಣನಿಗೆ ನೀಡಿ ಈಗ ಸುಮಾರು 41 ವರ್ಷ ಆಗಿರುತ್ತದೆ ಅಂದರೆ ಸರಿ. ಈಗಲೂ ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಉತ್ಪನ್ನ ನೀಡುತ್ತಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ಹಾಗೂ ನಾವು ಅವರಿಗೆ ವಾರಸುದಾರರು ಆಗುವುದಿಲ್ಲ ಅಂದರೆ ಸರಿಯಲ್ಲ. ಒಂದು ವೇಳೆ ನನ್ನ ತಂದೆಯವರು ದಾವಾ ಆಸ್ತಿಯನ್ನು ಗೇಣಿ ಮಾಡಿದ್ದರೆ ಸಾಗುವಳಿ ಕಾಲಂನಲ್ಲಿ ಅವರ ಹೆಸರು ನಮೂದು ಇರುತ್ತಿತ್ತು ಅಂದರೆ ಸಾಕ್ಷಿಯು ಅವರು ಕುಟುಂಬದ ವ್ಯವಸ್ಥಾಪಕರು ಆಗಿದ್ದರು ಎಂದು ಉತ್ತರಿಸುತ್ತಾರೆ. ದಾವಾದಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ

ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**